SRI KAGODU THIMMAPPA (Minister for Public Works)—

(a) The work was taken up during June 1975 and completed. The causeway was opened for traffic during January 1978.

(b) 89 cents of private agricultural lands were acquired from 5 land owners and out of them, one person only belongs to S.C.

(c) The amount of compensation could not be paid for want of passing of the award.

(d) Yes.

(e) The damages have been repaired immediately and traffic was restored on 10-10-1981. Hence there is no delay in effecting the repairs.

ಹಾಸನದ ಶ್ರೀಮತಿ ಎಲ್. ವಿ ತಾಂತ್ರಿಕ ಶಾಲೆಯ ವಿದ್ಯಾರ್ಥಿಗಳು ಕಳೆದ ವರ್ಷ ನಡೆಸಿದ ಮುಷ್ಕರದ ಬಗ್ಗೆ

೧೫ (೫೦) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ)—ವಿದ್ಯಾಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೆ ; —

(ಅ) ಹಾಸನ ಪಟ್ಟಣದ ಶ್ರೀಮತಿ ಎಲ್. ವಿ. ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಕಳೆದ ವರ್ಷ ತರಗತಿಗಳಿಗೆ ಹೋಗದೆ ಎಷ್ಟು ದಿನಗಳು ಮುಷ್ಕರ ನಡೆಸಿದರು ;

(ಆ) ಈ ರೀತಿ ಮುಷ್ಕರ ನಡೆಸಲು ಕಾರಣಗಳೇನು ?

ಶ್ರೀ ಜಿ. ಬಿ. ಶಂಕರರಾವ್ (ವಿದ್ಯಾ ಮಂತ್ರಿಗಳು)—

ಉತ್ತರ—(ಅ) ೧೬ ದಿನಗಳು.

(ಆ) ಶ್ರೀಮತಿ ಎಲ್. ವಿ. ತಾಂತ್ರಿಕ ಶಾಲೆಗೆ ಸೇರಿದ ಹಳೆಯ ಟೈಲರಿಂಗ್ ಶಾಲೆಯ ಕಟ್ಟಡಗಳನ್ನು, ಮಲೆನಾಡು ವಿದ್ಯಾಸಂಸ್ಥೆಗೆ ವರ್ಗಾಯಿಸದೆ, ಅದರಲ್ಲಿ ''ವಾಣಿಜ್ಯಶಾಸ್ತ್ರ'' ಮತ್ತು ''ವಸ್ತ್ರ ವಿನ್ಯಾಸ ಮತ್ತು ಉಡುಪು ತಯಾರಿಕೆ'' ವಿಷಯಗಳನ್ನು ಹೊಸದಾಗಿ ಪ್ರಾರಂಭಿಸಿ ನಡೆಸಬೇಕೆಂದು ಒತ್ತಾಯಿಸಿ ಮುಷ್ಕರ ನಡೆಸಲಾಯಿತು.

ಫಾರ್ಮಸಿ ಸೆಂಟರನ್ನು ಶಿವಮೊಗ್ಗದಲ್ಲಿ ಸ್ಥಾಪಿಸುವ ಬಗ್ಗೆ

೧೬ (೫೪) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ)—ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ ;—

(ಅ) ಶಿವಮೊಗ್ಗ ಜಿಲ್ಲೆಯು ಎಲ್ಲಾ ಆಸ್ಪತ್ರೆಗಳಲ್ಲಿ ಆಗಾಗ ಗ್ಲೂಕೋಸ್ ಬಾಟ್ಲಿಗಳ ಕೊರತೆ ಬಗ್ಗೆ ದೂರು ಇರುವುದು ಸರಕಾರ ಗಮನಿಸಿದೆಯೆ ;

(ಆ) ಎಲ್ಲಾ ಕೊರತೆಗಳನ್ನು ಗಮನಿಸಿ ಒಂದು ಫಾರ್ಮಸಿ ಸೆಂಟರನ್ನು ಶಿವಮೊಗ್ಗಕ್ಕೆ ಮಂಜೂರು ಮಾಡಿರುವುದು ನಿಜವೆ ;

(ಇ) ಹಾಗಿದ್ದರೆ ಏಕೆ ಕಾರ್ಯಗತಗೊಳಿಸಿಲ್ಲ, ಇನ್ನು ಎಷ್ಟು ದಿನಗಳಲ್ಲಿ ಕಾರ್ಯಗತಗೊಳಿಸ ಲಾಗುವುದು ;

(ಈ) ಸಧ್ಯಕ್ಕೆ ಕೊರತೆ ಸುಧಾರಣೆಗೆ ಸರಕಾರದ ಕ್ರಮಗಳೇನು ?

ಶ್ರೀ ಎ. ಕೆ. ಅಬ್ದುಲ್ ಸಮದ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು)—

ಉತ್ತರ—(ಅ) ಗಮನಿಸಿದೆ.

(ಆ) ನಿಜ.

(ಇ) ೧೯೮೧ ಆಗಸ್ಟ್ ಮಾಹೆಯಿಂದ ಫಾರ್ಮಸಿ ಸೆಂಟರು ಗ್ಲೂಕೋಸ್ ಉತ್ಪಾದನೆ ಆರಂಭವಾಗಿದೆ.

(ಈ) ಶಿವಮೊಗ್ಗದಲ್ಲಿ ಗ್ಲೂಕೋಸ್ ತಯಾರಿಕಾ ಘಟಕ ಆರಂಭವಾಗುವುದಕ್ಕೆ ಮೊದಲು ಶಿವಮೊಗ್ಗ ಜಿಲ್ಲೆಯ ಆಸ್ಪತ್ರೆಗಳಿಗೆ ಬೇಕಾಗುವ ಗ್ಲೂಕೋಸ್ ಬಾಟ್ಲಗಳನ್ನು ದಾವಣಗೆರೆ ಚಿಗಟೇರಿ ಜನರಲ್ ಆಸ್ಪತ್ರೆಯಿಂದ ಸರಬರಾಜು ಮಾಡಲು ಆದೇಶ ನೀಡಿತ್ತು. ಈಗ ಶಿವಮೊಗ್ಗದಲ್ಲೇ ಗ್ಲೂಕೋಸ್ ಘಟಕ ಪ್ರಾರಂಭವಾದ್ದರಿಂದ ಗ್ಲೂಕೋಸಿನ ಕೊರತೆ ಇರುವುದಿಲ್ಲ.

Lift Irrrgation Scheme at Huligudda

17 (61) SRI KOGALI KARIBASAVANA GOWDA (Hadagali)—Will the Minister for Transport and Minor Irrigation be pleased to state :—

(a) whether there is any proposal submitted by concerned MLA to Honible Chief Minister, in the year 1981-82 regarding Lift Irrigation Scheme at Huligudda (near Karadiayyanahalli) in Hadagali taluk which can irrigate about 3000 to 5000 acres ;

(b) if so, whether it will be included in 1982-83 Budget ?

SRI M. M. J. SADYOJATHA (Minister for Transport and Minor Irrigation)—

(a) Yes.

(b) Huligudda Lift Irrigation Scheme is not included in the Budget 1982-83.